
# ಧ್ವನಿಮುದ್ರಿಕೆ ಹಾಗೂ ಪುಸ್ತಕ ಬಿಡುಗಡೆ




ವಿಜಯನಗರದ ಚಿತ್ರನಾಟ್ಯ ಫೌಂಡೇಶನ್‌ನ ವತಿಯಿಂದ ಡಾ.ಎಲ್.ಜಿ.ಮೀರಾ ಅವರ ಧ್ವನಿಮುದ್ರಿಕೆ ಹಾಗೂ ಪುಸ್ತಕ ಬಿಡುಗಡೆ ಇಂದು ಬೆಳಗ್ಗೆ (ಜ.24) ನಡೆಯಲಿದೆ.

'ಆಕಾಶಮಲ್ಲಿಗೆಯ ಘಮ' ಕಥಾಸಂಕಲನ, ಶಾಲಾಮಕ್ಕಳ ನಾಟಕ ಸಂಕಲನ 'ರಂಗಶಾಲೆ', 'ಕೆಂಪು ಬಲೂನು ಮತ್ತು ಇತರ ಶಿಶುಗೀತೆಗಳು' ಧ್ವನಿಮುದ್ರಿಕೆ ಈ ಸಂದರ್ಭದಲ್ಲಿ ಬಿಡುಗಡೆಯಾಗಲಿವೆ. ವಿಮರ್ಶಕಿ ಡಾ.ಎಲ್ .ಸಿ.ಸುಮಿತ್ರಾ, ಕಾತ್ಯಾಯನಿ ಭಟ್ ಹಾಗೂ ಗಾಯಕ ಉಪಾಸನಾ ಮೋಹನ್ ಈ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಚಿತ್ರನಾಟ್ಯ ಫೌಂಡೇಶನ್‌ನ ವಿದ್ಯಾರ್ಥಿಗಳಿಂದ ನೃತ್ಯ ಹಾಗೂ ನಾಟ್ಯ ಪ್ರದರ್ಶನವೂ ಇದೆ.

**ಸಮಯ:** ಬೆಳಗ್ಗೆ 10.30
**ಸ್ಥಳ:** ಗ್ರಂಥಾಂಗಣ
ಸಾರ್ವಜನಿಕ ಗ್ರಂಥಾಲಯ
ಹಂಪಿನಗರ ■



